# ಬೋನ್ಸಾಯ್ ತವರು ಚೀನಾದಲ್ಲಿ




ದೇವಾಲಯದ ಮುಂಭಾಗದಲ್ಲಿರುವ ಬೋನ್ಸಾಯ್ ಕುಂಡಗಳು

■ **ವಸುಂಧರಾ ಎಸ್. ಕುಮಾರ್**
ಚಿತ್ರ: ಎಂ. ಶಾಂತಕುಮಾರ್

ಅಂಗೈ ಅಗಲದ ಬೋಗುಣಿಯಲ್ಲಿ ಮರಗಿಡ ಬಳ್ಳಿಗಳನ್ನು ಸಹಜ ನೈಸರ್ಗಿಕ ರೂಪದಲ್ಲೇ ಕುಬ್ಜಗೊಳಿಸುವ ಯತ್ನ ಆರಂಭಗೊಂಡು ಶತಮಾನಗಳೇ ಉರುಳಿವೆ. ಚೀನಾ, ಜಪಾನ್ ಪ್ರಪಂಚಕ್ಕೆ ನೀಡಿದ ಅಪೂರ್ವ ಕೊಡುಗೆ ವಿಶಿಷ್ಟ ಮಾದರಿ ಪುಷ್ಪ ಜೋಡಣೆಯ 'ಇಕೆಬಾನ' ಹಾಗೂ 'ಬೋನ್ಸಾಯ್'. ಈ ಎರಡೂ ಕಲಾ ಪ್ರಕಾರಗಳಲ್ಲಿ ಜಪಾನ್ ದೇಶ ಅತ್ಯುನ್ನತ ಶಿಖರದಲ್ಲಿದ್ದರೂ ಇವುಗಳ ತವರು ಚೀನಾ.

ಚೀನಾ ಭೇಟಿ ಸಂದರ್ಭದಲ್ಲಿ ಈ ಎರಡೂ ಕಲೆಗಳನ್ನು ಅವುಗಳ ತವರು ನಾಡಿನಲ್ಲಿ, ಸಹಜ ಮೂಲ ರೂಪದಲ್ಲಿ ಕಾಣುವ ಬಯಕೆ ಈಡೇರಿದ್ದು ಖುಷಿ ಕೊಟ್ಟಿತು.